KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2022

website: kud.ac.in

No. KU/Aca(S&T)/SSL-450/UGCE/2024-25/592 Date: 24/08/2024

## ಸುತ್ತೋಲೆ–4

ವಿಷಯ: ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ 2024–25ನೇ ಶೈಕ್ಷಣಿಕ ಸಾಲಿನಿಂದ 3 ವರ್ಷದ ಪದವಿ ತರಗತಿಗಳಿಗೆ 1ನೇ ಸೆಮಿಸ್ಟರ್‌ಗಳ ತರಗತಿಗಳ ಪ್ರವೇಶಕ್ಕೆ ದಂಡದ ಶುಲ್ಕದೊಂದಿಗೆ ಹಾಗೂ ಸೆಮೆಸ್ಟರ್ ಪ್ರಾರಂಭ ದಿನಾಂಕವನ್ನು ಮರುನಿಗದಿಪಡಿಸುವ ಕುರಿತು.

ಉಲ್ಲೇಖ: 1. ಸರಕಾರಿ ಆದೇಶ ಸಂಖ್ಯೆ ಇಡಿ 166/ ಯುಎನ್‌ಇ/ 2023, ಬೆಂಗಳೂರು ದಿ: 08.05.2024.
2. ಕಚೇರಿ ಸುತ್ತೋಲೆ ಸಂ.KU/Aca(S&T)/SSL-450/2024-25/281, ದಿ. 18.06.2024.
3. ಕಚೇರಿ ಸುತ್ತೋಲೆ ಸಂ.KU/Aca(S&T)/SSL-450/2024-25/731 ದಿ. 14.08.2024.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24/08/24

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, 2024–25ನೇ ಸಾಲಿಗೆ 1ನೇ ಸೆಮಿಸ್ಟರ್‌ಗೆ ಸಂಬಂಧಿಸಿದಂತೆ, ಉಲ್ಲೇಖ–3ರ ಕಚೇರಿ ಸುತ್ತೋಲೆಯಂತೆ ಅನ್ವಯವಾಗುವುದು. ಅದರಂತೆ, 1ನೇ ಸೆಮಿಸ್ಟರ್‌ನ ತರಗತಿಗಳನ್ನು ದಿನಾಂಕ: 29.08.2024 ರಿಂದ ಪ್ರಾರಂಭಿಸಲು ಸೂಚಿಸಲಾಗಿತ್ತು, ಆದರೆ, ಸರ್ಕಾರದಿಂದ ಹಲವು ಮಹಾವಿದ್ಯಾಲಯಗಳ ಸಂಯೋಜನೆ ಪ್ರಕ್ರಿಯೆಯು ಇಲ್ಲಿಯವರೆಗೂ ಪೂರ್ಣಗೊಳ್ಳದೇ ಇರುವುದರಿಂದ ಎಲ್ಲ ಸ್ನಾತಕ ಪದವಿಗಳ 01ನೇ ಸೆಮಿಸ್ಟರ್‌ಗೆ ತರಗತಿಗಳ ಪ್ರಾರಂಭದ ದಿನಾಂಕ: 29.08.2024ರ ಬದಲಾಗಿ ದಿನಾಂಕ: 02.09.2024 ರಿಂದ ತರಗತಿಗಳನ್ನು ಪ್ರಾರಂಭಿಸಲು ಸೂಚಿಸಲಾಗಿದೆ. (ಹೆಚ್ಚಿನ ಮಾಹಿತಿಗಾಗಿ Annexure-A ಪರಿಶೀಲಿಸುವುದು.)

ಮುಂದುವರೆದು, ರೂ. 740/–ರ ದಂಡದೊಂದಿಗೆ ಪ್ರವೇಶದ ಶುಲ್ಕವನ್ನು ದಿನಾಂಕ: 02.09.2024ರ ವರೆಗೆ ವಿಸ್ತರಿಸಲಾಗಿದೆ ಹಾಗೂ ವಿಶೇಷ ದಂಡ ರೂ. 5,140/–ರೊಂದಿಗೆ ಪ್ರವೇಶ ಶುಲ್ಕವನ್ನು ದಿನಾಂಕ: 09.09.2024ರ ವರೆಗೆ ನಿಗದಿಪಡಿಸಲಾಗಿದೆ ಹಾಗೂ ದಂಡರಹಿತ, ದಂಡ ಹಾಗೂ ವಿಶೇಷ ದಂಡದೊಂದಿಗೆ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಯಾದಿಯನ್ನು ದಿನಾಂಕ: 11.09.2024 ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

ಸದರ ಮಾಹಿತಿಯನ್ನು ಕ.ವಿ.ವಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಸುತ್ತೋಲೆಯಂತೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

A. Channappa
ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.